# Frequently Asked Questions

SHAPING VIBRANT CITIES

**1. Which roads are being redeveloped as part of Tender S.U.R.E phase 01?**

Currently Cunningham Road, Vittal Mallya Hospital Road, Residency Road, Richmond Road, Museum Road, St. Marks Road, and Commissariat Road have been taken up for redevelopment under Tender SURE phase 01.

**2. Who is responsible for the development of this road?**

The redevelopment of this road is an initiative of the Government of Karnataka, anchored by the BBMP. The design support is provided by Jana Urban Space & the contract has been awarded to Ms NAPC Pvt Ltd.

**3. Are you going to cut down trees to make room for the Tender S.U.R.E roads?**

No trees will be cut down as part of the redevelopment. In fact new trees will be planted on all roads. Great pain has been taken to circumvent the new services around the existing trees with a buffer radius of 1.5M to prevent damage to the roots.

**4. What will happen to the existing services when the new services are being laid?**

Great care is being taken not to disturb the existing service lines and BESCOM and BWSSB have a transmission plan ready for temporary services in the event the old pipes have to be removed. Supply to the new pipes will also be provided immediately.

**5. Is anything being done to prevent digging and redigging of these roads in the future?**

Yes, new service lines are being provided for storm water, sewer, water supply, electricity and OFC. Future provisions have also been made for gas lines. All these service lines are being provided on both sides of the road, under the footpath. The footpath is finished with paver blocks which can be easily removed and replaced for maintenance of the pipes. Therefore there will be no digging of the Tender SURE roads for the next 10 years !

**6. What has been done to prevent flooding of the roads during the monsoons?**

All the tender SURE roads have new storm water lines on the both sides of the travel lane. . There is a manhole every 30M with grating to collect the storm water from the travel lane and footpath. The roads and footpaths have been designed with sufficient cross sectional slopes to allow for speedy disposal of storm water

**7. Will I lose entry to my property because of the road digging?**

No you will not, temporary bridges will be provided so you can have vehicular access to your properties at all times.

**8. Will the footpath become narrower?**

On the contrary, the footpath will get wider with seating and designated vending and there is a separate continuous cycle track on the footpath which will allow for a safe route for cyclists.

**9. Where can I see more about what is happening to my road or air my grievances?**

Please log on to Ichangemycity.com and register on the tender SURE community. There is a separate community for each road, where the design team, contractors and government agency representatives will be able to answer your queries and address your grievances. You can also follow up on the progress of construction of the road.

# Frequently Asked Questions

SHAPING VIBRANT CITIES

### 1. ಟೆಂಡರ್ SURE ಹಂತ 1ರ ಭಾಗವಾಗಿ ಯಾವ ರಸ್ತೆಗಳು ಪುನರ್ ನಿರ್ಮಾಣಗೊಳ್ಳಲಿವೆ?

ಪ್ರಸ್ತುತವಾಗಿ ಕನ್ನಿಂಗ್ಹ್ಯಾಮ್ ರೋಡ್, ವಿಟ್ಟಲ್ ಮಲ್ಯ ಆಸ್ಪತ್ರೆ ರಸ್ತೆ, ರೆಸಿಡೆನ್ಸಿ ರಸ್ತೆ, ರಿಚ್ಮಂಡ್ ರಸ್ತೆ, ಮ್ಯೂಸಿಯಂ ರಸ್ತೆ, ಸೆಂಟ್ ಮಾರ್ಕ್ಸ್ ರಸ್ತೆ ಮತ್ತು ಕಮಿ ´ರಿಯೇಟ್ ರಸ್ತೆಗಳನ್ನು ಟೆಂಡರ್ SURE ಹಂತ 1ರ ಅಡಿಯಲ್ಲಿ ಪುನರಾಭಿವೃದ್ಧಿ ಪಡಿಸಲು ತೆಗೆದುಕೊಳ್ಳಲಾಗಿದೆ.

### 2. ಈ ರಸ್ತೆಯ ಅಭಿವೃದ್ಧಿಯ ಜವಬ್ದಾರಿ ಯಾರದು?

ಈ ರಸ್ತೆಯ ಪುನರ್ ಅಭಿವೃದ್ಧಿ ಯೋಜನೆಯು ಕರ್ನಾಟಕ ಸರ್ಕಾರದ ಯೋಜನೆಯಾಗಿದ್ದು, ಇದರ ನೇತೃತ್ವವನ್ನು ಬಿ.ಬಿ.ಎಂ.ಪಿ.ಯು ವಹಿಸಿರುತ್ತದೆ. ವಿನ್ಯಾಸ ಬೆಂಬಲ ನೀಡುತ್ತಿರುವುದು Jana Urban Space ಹಾಗು ಕಾಮಗಾರಿ ಗುತ್ತಿಗೆಯನ್ನು Ms NAPC pvt Ltd ನೀಡಲಾಗಿರುತ್ತದೆ

### 3. ಟೆಂಡರ್ SURE ರಸ್ತೆಗಳ ನಿರ್ಮಾಣಕ್ಕೆ ನೀವು ಮರಗಳನ್ನು ಕತ್ತರಿಸುವಿರಾ?

ಪುನರಾಭಿವೃದ್ಧಿಯಲ್ಲಿ ಮರಗಳನ್ನು ಕತ್ತರಿಸಲಾಗುವುದಿಲ್ಲ ವಾಸ್ತವವಾಗಿ ಹೊಸ ಮರಗಳನ್ನು ನೆಡಲಾಗುತ್ತದೆ ಹಾಗು ಹಳೆಯ ಅಸ್ತಿತ್ವದಲ್ಲಿರುವ ಮರಗಳ ಬೇರುಗಳಿಗೆ ಹಾನಿಯಾಗದಂತೆ 1.5 ಮೀ ಬಫರ್ ತ್ರಿಜ್ಯ ರೂಪಿಸಲಾಗಿದೆ.

### 4. ಹೊಸ ಸೇವೆಗಳನ್ನು ಜಾರಿಗೊಳಿಸುವಾಗ ಪ್ರಸ್ತುತ ಸೇವೆಗಳು ಏನಾಗುವವು?

ಪ್ರಸ್ತುತ ಸೇವೆಗಳನ್ನು ಯಾವುದೇ ತೊಂದರೆ ಇಲ್ಲದೆ ಅತ್ಯಂತ ಹೆಚ್ಚಿನ ಕಾಳಜಿಯನ್ನು ತೆಗೆದುಕೊಂಡು BESCOM ಮತ್ತು BWSSB ತಾತ್ಕಾಲಿಕ ಸೇವಾ ಯೋಜನೆ ಮಾಡಲಿದ್ದು. ಹಳೆಯ ಪೈಪ್‌ಗಳನ್ನು ತೆಗೆದು ಹೊಸದನ್ನು ಅಳವಡಿಸಿ ತಕ್ಷಣ ಸೇವೆ ಒದಗಿಸಲಾಗುತ್ತದೆ.

### 5. ಭವಿಷ್ಯದಲ್ಲಿ ರಸ್ತೆಗಳನ್ನು ಅಗೆಯುವುದನ್ನು ತಡೆಯಲು ಏನಾದರು ಕ್ರಮ ಕೈಗೊಳ್ಳಲಾಗಿದೆಯೇ?

ಹೌದು, ಹೆಚ್ಚಿನ ಮಳೆ ನೀರಿನ ಹರಿಯುವಿಕೆ, ಒಳ ಚರಂಡಿ, ನೀರು ಸರಬರಾಜು, ವಿದ್ಯುತ್ ಮತ್ತು ಓ.ಎಫ್.ಸಿ ಗಳಿಗಾಗಿ ಹೊಸ ಲೈನ್‌ಗಳನ್ನು ನಿರ್ಮಿಸಲಾಗುತ್ತದೆ. ಭವಿಷ್ಯದಲ್ಲಿ ಅನಿಲ ಇಂಧನಕ್ಕೂ ಲೈನ್ ನಿರ್ಮಿಸಲಾಗುತ್ತದೆ. ರಸ್ತೆಯ 2 ಕಾಲುದಾರಿಯ ಅಡಿಯಲ್ಲಿ ಈ ಸೇವಾ ವ್ಯವಸ್ಥೆ ಮಾಡಲಾಗುತ್ತದೆ. ಕಾಲುದಾರಿಗಳನ್ನು ಸುಲಭವಾಗಿ ತೆಗೆದು ಪೈಪ್‌ಗಳ ನಿರ್ವಣೆ ಮಾಡಬಹುದಾದ ಪವೆರ್ ಬ್ಲಾಕ್‌ಗಳನ್ನು ಮಾಡಿ ಪೈಪ್ ಜೋಡಣೆ, ಬದಲಾವಣೆ ವ್ಯವಸ್ಥೆ ಮಾಡಲಾಗುತ್ತದೆ. ಟೆಂಡರ್ SURE ನಿಂದ ಮುಂದಿನ 10 ವರ್ಷಗಳವರೆಗೆ ಯಾವುದೇ ರಸ್ತೆ ಅಗೆತದ ತೊಂದರೆ ಬರುವುದಿಲ್ಲ !

### 6 ಮಳೆಗಾಲದಲ್ಲಿ ನೀರಿನ ಪ್ರವಾಹ ತಡೆಗಟ್ಟಲು ಏನು ಕ್ರಮ ಕೈಗೊಳ್ಳಲಾಗಿದೆ?

ಟೆಂಡರ್ SURE ನಲ್ಲಿ ಮಳೆ ನೀರಿನ ಪ್ರವಾಹ ತಡೆಗಟ್ಟಲು ರಸ್ತೆ ಮತ್ತು ಕಾಲುದಾರಿಯ ಅಡಿಯಲ್ಲಿ 2 ಲೈನ್‌ಗಳ ನಿರ್ಮಾಣ ಮಾಡಲಾಗುತ್ತದೆ. ಪ್ರತಿ 30 ಮೀ.ಗೆ ಮ್ಯಾನ್ ಹೋಲ್‌ಗಳಿದ್ದು ಜಾಲರಿ ಹಾಗು ನೀರಿನ ಸಂಗ್ರಹಣೆಯ ವಿಲೇವಾರಿ ವ್ಯವಸ್ಥೆ ಮಾಡಲಾಗುತ್ತಿದೆ. ರಸ್ತೆಗಳು ಮತ್ತು ಕಾಲುದಾರಿಗಳು ಮಳೆಯ ಪ್ರವಾಹದ ನೀರಿನ ವೇಗದ ಮೇರೆಗೆ ಸಾಕಷ್ಟು ಛೇದ ಹಾಗು ಇಳಿಜಾರಿನ ವಿನ್ಯಾಸವನ್ನು ಮಾಡಿ ನೀರನ್ನು ಸಾಗಿಸುವ ವ್ಯವಸ್ಥೆ ಮಾಡಲಾಗಿರುತ್ತದೆ.

### 7. ರಸ್ತೆ ಅಗೆತದ ಕಾರಣದಿಂದ ನಾನು ನನ್ನ ನಿವಾಸಕ್ಕೆ ತೆರಳು ಮಾರ್ಗ ಕಳೆದುಕೊಳ್ಳುವ ಸಾಧ್ಯತೆಯಿದೆಯೇ?

ಇಲ್ಲ, ನಿಮಗಾಗಿ ತಾತ್ಕಾಲಿಕ ಸೇತುವೆಗಳನ್ನು ನಿರ್ಮಾಣ ಮಾಡಲಾಗುತ್ತದೆ, ಹಾಗಾಗಿ ಎಲ್ಲಾ ಸಮಯದಲ್ಲೂ ನಿಮ್ಮ ವಾಹನಕ್ಕೆ ಪ್ರವೇಶವನ್ನು ಕಲ್ಪಿಸಲಾಗಿರುತ್ತದೆ. ಇದರಿಂದ ನಿಮಗೆ ಯಾವುದೇ ತೊಂದರೆಯಾಗುವುದಿಲ್ಲ.

### 8. ಕಾಲುದಾರಿ ಕಿರಿದಾಗುವ ಸಾಧ್ಯತೆಯಿದೆಯೇ?

ಇಲ್ಲಾ. ಕಾಲುದಾರಿಯು ದೊಡ್ಡದಾಗಿರುತ್ತದೆ ಹಾಗು ಆಸನ ವ್ಯವಸ್ಥೆ, ಗೊತ್ತುಪಡಿಸಿದ ಮಾರಾಟ ವ್ಯವಸ್ಥೆಗೂ ಸ್ಥಳವಿರುತ್ತದೆ. ಪ್ರತ್ಯೇಕ ಸೈಕಲ್ ಮಾರ್ಗ ನಿರ್ಮಾಣವಿದ್ದು ಸುರಕ್ಷಿತ ಸೈಕಲ್ ಮಾರ್ಗ ಪಡೆಯುವರು.

### 9. ನನ್ನ ರಸ್ತೆಯ ಬಗ್ಗೆ ಏನಾಗುತ್ತಿದೆ ಅಥವಾ ಕುಂದು ಕೊರತೆಗಳೇನು ಎಂಬುದರ ಬಗ್ಗೆ ನಾನು ಎಲ್ಲಿ ನೋಡಬಹುದು?

ದಯವಿಟ್ಟು Ichangemycity.com ಗೆ ಲಾಗ್ ಆನ್ ಮಾಡಿ ಟೆಂಡರ್ SURE ಕಮ್ಯುನಿಟಿಯಲ್ಲಿ ನೀವು ರಿಜಿಸ್ಟರ್ ಮಾಡಿಕೊಳ್ಳಿ. ಅಲ್ಲಿ ಪ್ರತಿಯೊಂದು ರಸ್ತೆಗೂ ಪ್ರತ್ಯೇಕ ಕಮ್ಯುನಿಟಿಯಿದ್ದು ಅಲ್ಲಿ ವಿನ್ಯಾಸಗಾರರ ತಂಡ, ಗುತ್ತಿಗೆದಾರರು ಮತ್ತು ಸರ್ಕಾರಿ ಸಂಸ್ಥೆ ಪ್ರತಿನಿಧಿಗಳು ನಿಮ್ಮ ಪ್ರಶ್ನೆಗಳಿಗೆ ಹಾಗು ಕುಂದು ಕೊರತೆಗಳಿಗೆ ಉತ್ತರಿಸುವರು, ಇಲ್ಲಿ ನೀವು ರಸ್ತೆ ನಿರ್ಮಾಣದ ಪ್ರಗತಿಯನ್ನು ನೋಡಬಹುದು.